C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 110/2021

ದಿನಾಂಕಃ 25.09.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಡಿ.ಎಂ.ಎಂ. ವಕೀಲರಿಂದಃ

1) ನನಗೆ ಕನ್ನಡ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರುವುದಿಲ ಎಂದರೆ ಸಾಕ್ಷಿಯು ನನಗೆ ಸ್ವಲ್ಪ ಸ್ವಲ್ಪ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಕನ್ನಡದಲ್ಲಿ ವ್ಯಾಸಂಗ ಮಾಡಿಲ್ಲ.

2) ನಾವು ಒಟ್ಟು 6 ಜನ ಮಕ್ಕಳು. ಇವರ ಪೈಕಿ ಮೊದಲನೇಯವರು ನಯಾಜ್ ಎಂದರೆ ಸರಿ. ಎರಡನೆಯವರು ರಿಯಾಜ್. 3 ನೇ ಯವರು ಜಾಫರ್, 4 ನೇ ಯವರು ಅಹ್ಮಜತ್, 5 ನೇ ಯವರು ಅನ್ಸರ್ ಮತ್ತು ಕೊನೆಯದಾಗಿ ನಾನು 6 ನೇ ಯವರು ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ, ಮೊದಲನೆಯವರು ಮೃತಪಟ್ಟಿರುತ್ತಾರೆ ಎಂದು. ಈ ದಿವಸ ನ್ಯಾಯಾಲಯಕ್ಕೆ ಚಾಸಾ 5 ಅನ್ಸರ್ ಪಾಷ ಬಂದಿದ್ದಾರೆ ಎಂದರೆ ಸರಿ. ಜಾಫರ್ ರವರ ಹೆಂಡತಿಯ ಹೆಸರು ರೋಹಿನಾ ತಬಸು. ಚಾಸಾ 2 ಆಸೀಫ್ ಅಲಿಯಾಸ್ ರವರು ನನ್ನ ಅಣ್ಣನ ಹೆಂಡತಿಯ ತಮ್ಮನಾಗಬೇಕು ಎಂದರೆ ಸರಿ. 1 ರಿಂದ 3 ನೇ ಆರೋಪಿತರು ನಿಮಗೆ ಚೆನ್ನಾಗಿ ಗೊತ್ತು ಅಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತು, ಚೆನ್ನಾಗಿ ಅಲ್ಲ, ಅವರು ನಮ್ಮ ಊರಿನವರು ಎಂದು ಉತ್ತರಿಸುತ್ತಾರೆ.

3) 3 ನೇ ಆರೋಪಿತ ನಿಶಾದ್ ಖಾನ್, ಬೆಳ್ಳೂರು ಹೈವೇ ಕ್ರಾಸ್ ನಲ್ಲಿ ಇರುವ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೊಟ್ಟಿರುವ ದೂರಿನಲ್ಲಿ, ನನ್ನ ಅಣ್ಣನ ಮೇಲೆ ಕೇಸು ಆಗಿತ್ತು ಎಂದು ನಾನು ಬರೆಸಿಲ್ಲ. ನಿಪಿ.1 (ಎ) ನನ್ನ ಸಹಿ ಆಗಿರುತ್ತದೆ. ನಿಪಿ 1 ದೂರಿನಲ್ಲಿ, ನಾನು ''ನಾನು ಮೇಲಿನ ವಿಳಾಸದಲ್ಲಿ ವಾಸವಿರುತ್ತೇನೆ. ಈಗ್ಗೆ ಎರಡು ತಿಂಗಳ ಹಿಂದೆ ನನ್ನ ಅಣ್ಣ ಜಾಫರ್ ಎಂಬುವರ ಮೇಲೆ ಕೇಸು ಆಗಿತ್ತು. ನನ್ನ ಅಣ್ಣ ಕೇಸು ಆದ ನಂತರ ಊರು ಬಿಟ್ಟು ಹೋಗಿರುತ್ತಾರೆ. '' ಎಂದು ಬರೆಸಿತ್ತೇನೆ ಎಂದರೆ ಸರಿ. ನನ್ನ ಅಣ್ಣ ಜಾಫರ್ ಮೇಲೆ, 16 ವರುಷದ ಹಜೀರಾ ಬಿನ್ ಸಾದಿಕ್ ಷರೀಫ್ ಎನ್ನುವವರು ನೀಡಿದ ದೂರಿನ ಮೇರೆಗೆ, ನನ್ನ ಅಣ್ಣ

ಊರನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿ. ಹಾಗೂ ಸದರಿ ದೂರಿನ ಪ್ರಕಾರ ಅಪರಾಧ ನಂಃ 136/2016 ರಂತೆ ಪೊಕ್ಸೋ ಕೇಸ್ ಕಲಂ 376 ಐಪಿಸಿ ಅಡಿಯಲ್ಲಿ ಕೇಸು ದಾಖಲಾಗಿದೆ ಎಂದರೆ ಸರಿ. ಹಾಗೂ ಈ ಪೋಕ್ಸೋ ಕೇಸ್ ನಲ್ಲಿ ನನ್ನ ಅಣ್ಣ ಜೈಲಿನಲ್ಲಿ ಇದ್ದರು ಎಂದರೆ ಸ ರಿಯಲ್ಲ. ಪೋಕ್ಸೋ ಕೇಸ್ನಲ್ಲಿ ದೋಷಾರೋಪಣ ಪಟ್ಟಿಯನ್ನು ಹಾಕಿ ಕೇಸು ಮುಕ್ತಾಯ ವಾಗಿದೆ ಎಂದರೆ ಸರಿ. ಮೇಲೆ ಪೊಕ್ಸೋ ಕೇಸಿಗೆ ಸಂಬಂಧಿಸಿದ ನ್ಯಾಯಾಲಯದ ದೃಢೀಕೃತ ನಕಲಾದ ಎಫ್ ಐ ಆರ್ ಮತ್ತು ದೋಷಾರೋಪಣ ಪಟ್ಟಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಈ ದಾಖಲೆಗಳನ್ನು ನಿಡಿ.1 ಮತ್ತು ನಿಡಿ.2 ಎಂದು ಗುರುತಿಸಲಾಯಿತು. ನನ್ನ ಅಣ್ಣ ಜಾಫರ್ ಹಜೀರಾ ಎಂಬ ಹುಡುಗಿಯನ್ನು ಬೆಳ್ಳೂರು ಕ್ರಾಸ್ ನಲ್ಲಿರುವ ಲಾಡ್ಜ್ನ ಕರೆದುಕೊಂಡು ಹೋಗಿದ್ದರು, ಅ ಸಂಬಂಧವಾಗಿ ಪೋಕ್ಸೋ ಕೇಸ್ ಆಗಿತ್ತು. ಪೋಕ್ಸೋ ಕೇಸ್ ಗೆ ಸಂಬಂಧಪಟ್ಟಂತೆ ದೂರು ದಾಖಲಾಗಿತ್ತು ಎಂದರೆ ಸಾಕ್ಷಿಯು, ವಕೀಲರಿಗೆ ನೀವು ನನಗೆ ಈಗ ದೂರಿನಲ್ಲಿ ಇರುವ ಅಂಶಗಳನ್ನು ಓದಿ ಹೇಳಿದ ಮೇಲೆ ನನಗೆ ಈ ವಿಷಯ ತಿಳಿಯಿತು ಎಂದು ಉತ್ತರಿಸುತ್ತಾರೆ ಹಾಗೂ ಈ ಮೊದಲು ನನಗೆ ಈ ವಿಷಯ ಗೊತ್ತಿರಲಿಲ್ಲ ಎನ್ನುತ್ತಾರೆ. ಹಜೀರಾ ದೂರನ್ನು ಕೊಟ್ಟ ನಂತರ 3 ನೇ ಆರೋಪಿತ, ಊರಿನ ಮುಖಂಡರು ಮತ್ತು ಸಂಬಂಧಿಕರು ನಮ್ಮ ಮನೆಯ ಹತ್ತಿರ ಬಂದಿದ್ದರು ಸರಿ. ಆಗ ಅಲ್ಲಿದ್ದ ಮುಖಂಡರು, ನಿಮ್ಮ ಅಣ್ಣ ಜಾಫರ್ ಹಜೀರಾ ಎಂಬ ಹುಡುಗಿಯನ್ನು ಕರೆದುಕೊಂಡು ಹೋಗಿ ಲಾಡ್ಜಿ ನಲ್ಲಿ ಇರಿಸಿಕೊಂಡು ಈ ರೀತಿ ತಪ್ಪು ಮಾಡಿದ್ದಾನೆ ಎಂದು ಕೂಗಾಡುತ್ತಿದ್ದರು ಎಂದರೆ ಸಾಕ್ಷಿಯು ಬಂದಿದ್ದರು, ಯಾರು ಯಾರು ಬಂದಿದ್ದರು ಎಂದು ಗೊತ್ತಿಲ್ಲ, ಊರಿನ ಮುಖಂಡರು ಬಂದಿದ್ದರು ಎಂದು ನುಡಿಯುತ್ತಾರೆ. ಆಗ ನಾವು ಸಹ ಅವರೊಂದಿಗೆ ಜೋರಾಗಿ ಕೂಗಾಡುವುದು ನಡೆದಿತ್ತು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು, ಅನ್ವರ್ ಪಾಷ, ಅಹ್ಮದ್ ಪಾಷ ಎಲ್ಲ ಸೇರಿಕೊಂಡು, 3 ನೇ ಆರೋಪಿಯಾದ ನಿಶಾದ್ ಖಾನ್ ಗೆ ಖಾರದಪಡಿಯನ್ನು ಎರಚಿ, ರಾಡಿನಿಂದ ಹೊಡೆದು ಹಲ್ಲೆ ಮಾಡಿದ್ದೆವು ಎಂದರೆ ಸರಿಯಲ್ಲ. 3 ನೇ ಆರೋಪಿಗೆ ನಾವು ಖಾರದ ಪುಡಿಯನ್ನು ಎರಚಿ ಹಲ್ಲೆ ಮಾಡಿದ್ದರಿಂದ, ನಮ್ಮ ಮೇಲೆ ಅಪರಾಧ ನಂಃ 183/2016, ಎಸ್.ಸಿ 112/2021 ಕೇಸು ಮಂಡ್ಯದ 2 ನೇ ಎಡಿಜೆ ನ್ಯಾಯಾಯದಲ್ಲಿ ನಡೆದಿತ್ತು ಎಂದರೆ ಸರಿ ಹಾಗೂ ಆ ಕೇಸು ಈಗ ಮುಗಿದಿದೆ ಎಂದರೆ ಸರಿ. ಈ ಕೇಸಿಗೆ ಸಂಬಂಧಪಟ್ಟಿರುವ ದೂರಿನ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಅದನ್ನು ನಿಡಿ.3 ಎಂದು ಗುರುತಿಸಲಾಯಿತು.

4) ನನ್ನ ಅಣ್ಣ ಜಾಫರ್, ಹುಡುಗಿ ಹಜೀರಾ ರವರನ್ನು ಬೆಳ್ಳೂರು ಕ್ರಾಸ್ ನಲ್ಲಿ ಇರುವ ಲಾಡ್ಜ್ ಗೆ ಕರೆದುಕೊಂಡು ಹೋಗಿದ್ದನ್ನು ಅಲ್ಲಿ ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದ 3 ನೇ ಆರೋಪಿತನಾದ

ನಿಶಾದ್ ಖಾನ್ ರವರು ನೋಡಿ, ಮುಖಂಡರಿಗೆ ಮತ್ತು ಸಂಬಂಧಿಕರಿಗೆ ತಿಳಿಸಿದರು, ಹಾಗೂ ಈ ರೀತಿ ತಿಳಿಸಿದ್ದರಿಂದ ನ್ಯಾಯ ಕೇಳುವುದಕ್ಕಾಗಿ, ನಮ್ಮ ಮನೆಯ ಹತ್ತಿರ 3 ನೇ ಆರೋಪಿತ, ಸಂಬಂಧಿಕರು, ಮುಖಂಡರು ಬಂದಿದ್ದರು, ಆ ಸಮಯದಲ್ಲಿ ಗಲಾಟೆ ಆಯಿತು, ಆಗ ಗಲಾಟೆಯಾದಂತಹ ಸಂದರ್ಭದಲ್ಲಿ 50-60 ಜನರ ಮೇಲೆ ಕೇಸು ದಾಖಲಾಗಿತ್ತು ಎಂದರೆ ಸಾಕ್ಷಿಯು ಪೊಲೀಸರಿಗೆ ಹಲ್ಲೆ ಮಾಡಿದ್ದರಿಂದ ಈ ಕೇಸು ಆಗಿತ್ತು ಎಂದು ನುಡಿಯುತ್ತಾರೆ. 3 ನೇ ಆರೋಪಿ, ಮುಖಂಡರು ಮತ್ತು ಹಜೀರಾರವರ ಸಂಬಂಧಿಕರು ಮೊದಲು ನಮ್ಮ ಮನೆಯ ಹತ್ತಿರ ಬಂದಿದ್ದರು.

5) 3 ನೇ ಆರೋಪಿತ, ನನ್ನ ಅಣ್ಣಜಾಫರ್ ಮೇಲೆ ಹೇಳಿದ್ದರಿಂದ , ಕೇಸು ನೊಂದಣಿಯಾಯಿತು ಮತ್ತು ನಮ್ಮ ಕುಟುಂಬದ ಮರ್ಯಾದೆ ಹೋಯಿತು ಎಂಬ ಕಾರಣಕ್ಕೆ ಸುಳ್ಳು ದೂರನ್ನು 3 ನೇ ಆರೋಪಿತ ಮತ್ತು ಇತರೆ ಆರೋಪಿಗಳ ಮೇಲೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೊಪಿತ,ನಮ್ಮ ವಿರುದ್ದ 2 ನೇ ಎಡಿಜೆ ನ್ಯಾಯಾಲಯದಲ್ಲಿ ಕೊಟ್ಟಿದ್ದ ಕೇಸಿನಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ, ನಾನು ಆರೋಪಿತರ ಮೇಲೆ ಸುಳ್ಳು ಕೇಸನ್ನು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಜಾಫರ್ ಗೆ ಈಗ ಸುಮಾರು 45 ವರುಷ ವಯಸ್ಸು ಆಗಿದೆ. ನನ್ನ ಅಣ್ಣನಿಗೆ ಮದುವೆಯಾಗಿ ಸುಮಾರು 20 ವರುಷದ ಮೇಲೆ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎನ್ನುತ್ತಾರೆ. ನನ್ನ ಅಣ್ಣನಿಗೆ 18 ವರುಷ ವಯಸ್ಸಿನ ಮಗನಿದ್ದಾನೆ. ನನ್ನ ಅಣ್ಣನ ಮೇಲೆ ಪ್ರಕರಣದ ದಾಖಲಾಗಿದ್ದ ಸಂದರ್ಭದಲ್ಲಿ ನನ್ನ ಅಣ್ಣನ ಮಗನಿಗೆ 14 ವರುಷ ವಯಸ್ಸು ಆಗಿತ್ತು ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ.

6) ನಿಪಿ .1 ದೂರಿನಲ್ಲಿ ಎಷ್ಟು ಪೇಜ್ ಗಳಲ್ಲಿ ಬರೆದಿದ್ದಾರೆ, ಎಷ್ಟು ಪ್ಯಾರಾಗಳನ್ನು ಬರೆದಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಅದೇ ರೀತಿ ಯಾವ ಯಾವ ಪ್ಯಾರಾದಲ್ಲಿ ಏನು ಏನು ಬರೆದಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಘಟನೆ ನಡೆದು 7 ವರುಷಗಳು ಆಗಿರುವುದರಿಂದ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಬಂದಿದ್ದ ದಿವಸ ಯಾವ ಬಟ್ಟೆಗಳನ್ನು ಹಾಕಿಕೊಂಡಿದ್ದರು, ಯಾವ ಗಾಡಿಯಲ್ಲಿ ಬಂದಿದ್ದರು, ಗಾಡಿಯು ಯಾವ ಕಂಪನಿಯದ್ದು, ಯಾರಿಗೆ ಸೇರಿದ್ದು ಎಂದು ದೂರಿನಲ್ಲಿ ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ಕಬ್ಬಿಣದ ರಾಡನ್ನು ಯಾರು ತಂದಿದ್ದರು, ಅದರ ಉದ್ದ ಎಷ್ಟಿತ್ತು ಎಂಬ ಮಾಹಿತಿಯನ್ನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ. ಘಟನೆ ನಡೆದಂತಹ ಸ್ಥಳದ ಹತ್ತಿರ ಎಡಗಡೆಗೆ ಪೊಲೀಸ್ ಠಾಣೆ ಸಿಗುತ್ತದೆ ಎಂದರೆ ಸಾಕ್ಷಿಯು, ನನಗೆ ಎಡಗಡೆ ಬಲಗಡೆ ಎಂದು

ಗೊತ್ತಾಗುವುದಿಲ್ಲ ಆದರೆ ಘಟನಾ ಸ್ಥಳದಿಂದ ಸುಮಾರು 1 ಕಿಮೀ ದೂರದಲ್ಲಿ ಪೊಲೀಸ್ ಠಾಣೆ ಇದೆ ಎಂದು ನುಡಿಯುತ್ತಾರೆ.

7) ಮಂಡ್ಯದಿಂದ ನಾಗಮಂಗಲ ಕಡೆಗೆ ಹೋಗುವಾಗ ಹಾಗೂ ಮೈಸೂರು ಕಡೆಯಿಂದ ನಾಗಮಂಗಲ ಕಡೆಗೆ ಹೋಗುವಾಗ ಎರಡು ಜೋಡಣೆ ಆಗುವ ರಸ್ತೆಯಲ್ಲಿ ಬಲಗಡೆಗೆ ಒಂದು ಮಿನಿ ವಿಧಾನಸೌಧ ಇದೆ ಎಂದರೆ ಸರಿ. ನಮ್ಮ ಮನೆಗೆ ಮಂಡ್ಯ ಕಡೆಯಿಂದಲೂ ಬರಬಹುದು, ಮೈಸೂರು ಕಡೆಯಿಂದಲೂ ಬರಬಹುದು. ಸರ್ಕಲ್ ನಿಂದ ಎಡಗಡೆಗೆ ಹೋದರೆ ನಾಗಮಂಗಲ ಪೊಲೀಸ್ ಠಾಣೆ ಸಿಗುತ್ತದೆ ಎಂದರೆ ಸಾಕ್ಷಿಯು ಇನ್ನೊಂದು ಸರ್ಕಲ್‌ನಿಂದ ಮುಂದೆ ಹೋದ ಮೇಲೆ ನಾಗಮಂಗಲ ಪೊಲೀಸ್ ಠಾಣೆ ಸಿಗುತ್ತದೆ ಎಂದು ನುಡಿಯುತ್ತಾರೆ. ಸರ್ಕಲ್ ನಿಂದ ಮುಂದಕ್ಕೆ ಹೋದರೆ, ಅಲ್ಲಿ ಮೊದಲಿಗೆ ಸರ್ಕಲ್ ಇನ್ಸ್ ಪೆಕ್ಟರ್ ಆಫೀಸ್ ನಂತರ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆ ಆವೇಲೆ ಡಿವೈಎಸ್ ಪಿ ಆಫೀಸ್ ಇದೆ ಎಂದರೆ ಸಾಕ್ಷಿಯು ಸರ್ಕಲ್ ನಿಂದ 1 ಕಿಮೀ ಮುಂದಕ್ಕೆ ಹೋದ ನಂತರ ಮೊದಲಿಗೆ ಸರ್ಕಾರಿ ಆಸ್ಪತ್ರೆ ಇದೆ, ನಂತರ ಸರ್ಕಲ್ ಇನ್ಸ್ ಪೆಕ್ಟರ್ ಆಫೀಸ್ ನಂತರ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆ, ಅರಣ್ಯ ಇಲಾಖಾ ಕಚೇರಿ ಸಿಗುತ್ತದೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾಗ, ಯಾವ ವೈದ್ಯರು ಇದ್ದರು, ಅವರ ಹೆಸರು ಏನು, ಅಲ್ಲಿದ್ದ ಪೊಲೀಸ್ ಅಧಿಕಾರಿಯ ಹೆಸರು ಮತ್ತು ranking ಏನು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

8) ಮುಮಾ.1 ರಾಡು ಸಾಮಾನ್ಯವಾಗಿ ಗುಜರಿಯಲ್ಲಿ ಸಿಗುತ್ತದೆ ಎಂದರೆ ಸಾಕ್ಷಿಯು ಯಾವ ಅಂಗಡಿಯಲ್ಲಿ ಬೇಕಾದರೂ ಸಿಗುತ್ತದೆ ಎಂದು ಹೇಳುತ್ತಾರೆ. ಮು.ಮಾ 1 ರಾಡಿನಲ್ಲಿ ವಿಶೇಷವಾದ ಗುರುತು ಇರುವ ಬಗ್ಗೆ ನಾನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿಗಳು ನನಗೆ ಹೊಡೆದಿದ್ದ ಜಾಗದಲ್ಲಿ, ಆರೋಪಿಗಳು ಯಾವ ದಿಕ್ಕಿನಲ್ಲಿ ನಿಂತಿದ್ದರು, ಯಾವ ದಿಕ್ಕಿನಿಂದ ಬಂದಿದ್ದರು ಹಾಗೂ ಆಸೀಫ್ ನ್ನು ಹೊರತು ಪಡಿಸಿ ಬೇರೆ ಯಾರು ಇದ್ದರು ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಮುಮಾ 1 ರಾಡಿನಿಂದ ಆರೋಪಿಗಳು ನನಗೆ ಹೊಡೆದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಆಗಿರುವ ಗಾಯಳಿಗೂ ಹಾಗೂ ಮುಮಾ.1 ರಾಡಿಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಂಡ್ಯದ 2 ನೇ ಎಡಿಜೆ ನ್ಯಾಯಾಲಯದಲ್ಲಿ ಎಸ್ ಸಿ ನಂಃ 112/2021 ಮತ್ತು ನನ್ನ ಅಣ್ಣ ಜಾಪರ್ ಮೇಲೆ ಹಜೀರಾ ಕೊಟ್ಟಿದ್ದ ಪ್ರಕರಣ ಮತ್ತು 3 ನೇ ಆರೋಪಿ ಕೊಟ್ಟಿದ್ದ ದೂರಿನಿಂದ ನಮಗೆ ಈ ರೀತಿ ತೊಂದರೆ ಆಯಿತು ಎಂದು ಹೇಳಿ,

ದುರುದ್ದೇಶದಿಂದ ಆರೋಪಿಗಳ ಮೇಲೆ ಈ ಪ್ರಕರಣದಲ್ಲಿ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ 1 ರಿಂದ ಮುಮಾ.3 ಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹದು ಸುಳ್ಳಿಂದ, ದುರುದ್ದೇಶದಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಹೇಳಿರುವ ರೀತಿಯಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.